**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ**
**ನ್ಯಾಯಾಲಯ ಮುಂಡಗೋಡ.**

ಸಿಸಿ ನಂಃ 19/2024

ಡಿ. ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ಶಿವರಾಜ ಬಮ್ಮಿಗಟ್ಟಿ |
| ತಂದೆಯ ಹೆಸರು | ಮಲ್ಲೇಶಪ್ಪ |
| ವಯಸ್ಸು | 36 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ್ತವ್ಯ | ಕಾಳಗನಕೊಪ್ಪ, ಮುಂಡಗೋಡ. |

ಸಾಕ್ಷಿಯನ್ನು ದಿನಾಂಕ **28.10.2025** ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಸ್ವ-ಪ್ರಮಾಣೀಕೃತ ಹೇಳಿಕೆಃ**

ನಾನು ಪಿರ್ಯಾದ ಕಡೆ ಕೆಲಸ ಮಾಡುತ್ತಿದ್ದೆ, ಆದರೆ ನನಗೆ ಅವರ ಬಳಿ ಕೆಲಸ ಮಾಡುವುದು ಇಷ್ಟ ಆಗದೇ ಇರುವ ಕಾರಣ, ನಾನು ಅವರ ಕಡೆ ಕೆಲಸಕ್ಕೆ ಹೋಗುವುದು ಬಿಟ್ಟು ಬೇರೆ ಕಡೆ ಕೆಲಸಕ್ಕೆ ಹೊರಟೆನು. ನಾನು ಶ್ರೀರಾಮ ಫೈನಾನ್ಸ ಕಂಪನಿಯಲ್ಲಿ ಬೈಕ್ ಲೋನ್ ನ್ನು ಮಾಡಿದ್ದು, ಅದಕ್ಕೆ ಸಂಬಂಧಿಸಿದಂತೆ , ನಾನು ಚೇತನ್ ಎನ್ನುವವರ ಬಳಿ 4 ಬ್ಲಾಂಕ್ ಚೆಕ್ ಗಳನ್ನು ಕೊಟ್ಟಿದ್ದೆ. ಈಗ ನಾನು ತೆಗೆದುಕೊಂಡ ಲೋನ್ ತಿರುವಳಿಯಾಗಲು ಬಂದಿದ್ದು, ನಾನು ಕೊಟ್ಟ ಚೆಕ್ ಗಳನ್ನು ವಾಪಸ್ಸು ಕೊಡುವಂತೆ ಕೇಳಿದಾಗ, ಅವರು ಚೆಕ್ ಇವೆ ಎಂದು ಹೇಳಿರುತ್ತಾರೆ, ಆದರೆ ಪಿರ್ಯಾದಿ ಕಡೆ ಚೆಕ್ ಹೇಗೆ ಹೋಯಿತೆಂದು ನನಗೆ ಗೊತ್ತಿಲ್ಲ. ಈ ಪ್ರಕರಣ ದಾಖಲಾದ ಬಗ್ಗೆ ವಾರಂಟ್ ಆದಾಗಲೇ ನನಗೆ ತಿಳಿದುಬಂದಿರುತ್ತದೆ. ಅದಾದ ನಂತರ ನಾನು ವಕೀಲರನ್ನು ಭೇಟಿ ಮಾಡಿರುತ್ತೇನೆ. ನನಗೆ ನೋಟಿಸ್ಸು ಸಹ ಬಂದಿದ್ದು ಇರುವುದಿಲ್ಲ. ಪಿರ್ಯಾದಿಯು ನನಗೆ 25,000/- ರೂಪಾಯಿಗಳನ್ನು ಕೊಟ್ಟಿದ್ದು, ಅದನ್ನು ನಾನು ಬಡ್ಡಿಯ ಸಮೇತ 50,000/- ರೂಪಾಯಿಗಳನ್ನು ವಾಪಸ್ಸು ಕೊಟ್ಟಿರುತ್ತೇನೆ. ಪಿರ್ಯಾದಿಯ ತಂದೆಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಕಾಲಕ್ಕೆ ನಾನು ತಕ್ಷಣವೇ 50,000/- ರೂಪಾಯಿಗಳನ್ನು ಕೊಟ್ಟಿರುತ್ತೇನೆ. ಪಿರ್ಯಾದಿಯು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾನೆ. ನಾನು ಚೆಕ್ ಗೆ ಸಹಿ ಮಾಡಿ ಕೊಟ್ಟಿದ್ದು ಇರುವುದಿಲ್ಲ. ಆದ ಕಾರಣ ನನ್ನನ್ನು ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**(ಈ ಹಂತದಲ್ಲಿ ಪಾಟೀ ಸವಾಲಿಗೆ ಪಿರ್ಯಾದಿ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

**ಪ್ರ ದ ನ್ಯಾದಂ ಮುಂಡಗೋಡ.**